ಲಘು ವ್ಯಾಜ್ಯ ಸಂಖ್ಯೆ 15/2022

ಪ್ರಾ.ಸಾ-1

ದಿನಾಂಕಃ 15.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ಶ್ರೀ ಜಿ ಜಿ ಎಸ್. - ವಾದಿಯ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಮೇರೆಗೆ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ವಾಗ್ದಾನ ಪತ್ರ, ತಿಳುವಳಿಕೆ ಪತ್ರ, ಅಂಚೆ ರಶೀದಿ, ಅಂಚೆ ಸ್ವೀಕೃತಿ, ಪ್ರತ್ಯುತ್ತರ ಮತ್ತು ಅಂಚೆ ಕವರ ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 6 ಎಂದು ಗುರುತಿಸಲಾಯಿತು.

ನಿ.ಪಿ.1 ರಲ್ಲಿ ಇರುವ ಪ್ರತಿವಾದಿಯ ಮೂರು ಸಹಿಗಳನ್ನು ಮತ್ತು ಸಾಕ್ಷಿದಾರರಾದ ಸಿದ್ದಯ್ಯರವರ ಹೆಬ್ಬೆಟ್ಟಿನ ಗುರುತನ್ನು ಹಾಗೂ ಶಮಂತ್ ಹತ್ವಾರ್ ಜಿ. ರವರ ಎರಡು ಸಹಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಪ್ರತಿವಾದಿಯ ಮೂರು ಸಹಿಗಳನ್ನು ಒಟ್ಟಿಗೆ ನಿ.ಪಿ.1(ಎ) ಎಂದು ಮತ್ತು ಸಾಕ್ಷಿದಾರರಾದ ಶಮಂತ್ ಹತ್ವಾರ್ ಜಿ.ರವರ ಎರಡೂ ಸಹಿಗಳನ್ನು ಒಟ್ಟಿಗೆ ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

**ಪ್ರತಿವಾದಿಯು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**